**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.768/17**

**ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ- 8**

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಮಾರ್ |
| ತಂದೆಯ/ ಗಂಡನ ಹೆಸರು | : | ಹನುಮೇಗೌಡ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ |
| ವಾಸ ಸ್ಥಳ | : | ಹುಣಸೂರು |

**ದಿನಾಂಕ 04.12.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2015 ರಿಂದ 2018 ರವರೆಗೆ ಬೀಚನಹಳ್ಳಿ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 04.03.2017 ರಂದು ನಾನು ಠಾಣಾ ಉಸ್ತುವಾರಿಯಲ್ಲಿ ಇದ್ದಾಗ ಸಿಪಿಐ ಹರೀಶ್ ಎಂಬುವವರು ನನಗೆ ಕರೆ ಮಾಡಿ ಎನ್ ಬೇಗೂರು ಗ್ರಾಮದಲ್ಲಿ ಆಸಾಮಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಸ್ವ ವರದಿ ತಯಾರಿಸಿ FIR ದಾಖಲಿಸಿ ನಾನು ಚಾಸಾ 4 ಮತ್ತು 5 ರವರು ಇಲಾಖಾ ವಾಹನ ಸಂಖ್ಯೆ KA-55-G-401 ವಾಹನದಲ್ಲಿ ಎನ್ ಬೇಗೂರು ಗ್ರಾಮಕ್ಕೆ ಮಧ್ಯಾಹ್ನ 2.30 ಕ್ಕೆ ಹೋದಾಗ ಆರೋಪಿ ನಮ್ಮ ಮನೆಯ ಹತ್ತಿರ ಒಂದು ಬಿಳಿ ಪ್ಲಾಸ್ಟೀಕ್ ಚೀಲದಲ್ಲಿ

ಮದ್ಯ ಮಾರಾಟ ಮಾಡುತ್ತಿದ್ದು 2-3 ಜನರು ಅಲ್ಲೇ ನಿಂತು ಕುಡಿಯುತ್ತಿದ್ದರು. ನಮ್ಮನ್ನು ನೋಡಿ ಅವರು ಓಡಿ ಹೋಗಿದ್ದು, ನಂತರ ನಮ್ಮ ಸಿಬ್ಬಂದಿ ಅವರನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಸೋಮಣ್ಣ ಬಿನ್ ಹನುಮಯ್ಯ ಎಂದು ತಿಳಿಸಿದರು. ನಂತರ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿ ನೋಡಲಾಗಿ 90ml ನ 30 ವಿಂಡಸರ್ ಡಿಲೇಕ್ಸ ವಿಸ್ಕಿ ಹಾಗೂ 90 ml 22 ಒರಿಜಿನಲ ಚಾಯ್ಸು ಡಿಲೇಕ್ಸ ವಿಸ್ಕಿ ಪೌಚುಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 3 ರಿಂದ 4 ಗಂಟೆ ವರೆಗೂ ಮಹಜರ ಕ್ರಮ ಜರುಗಿಸಿರುತ್ತೇನೆ. ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 16 ಮತ್ತು 12 ಪೌಚುಗಳನ್ನು ಪ್ರತ್ಯೇಕವಾಗಿ ತೆಗೆದು ಎನ್ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ಮಾಲು ಸಮೇತ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ. ನಿಪಿ 1 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 1 ಸಿ, FIR ನಿಪಿ 6, ಸಾಕ್ಷಿ ಸಹಿಯನ್ನು ನಿಪಿ 6 ಎ, ಸ್ವ ವರದಿಯನ್ನು ನಿಪಿ 7, ಸಾಕ್ಷಿ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. ಮು.ಮಾ 1 ರಿಂದ 29 ನೋಡಿ ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಮಗೆ ಮಾಹಿತಿ ಬಂದಾಗ ಮಧ್ಯಾಹ್ನ 1.15 ಆಗಿತ್ತು. ನನಗೆ ಮಾಹಿತಿ ಬಂದಾಗ ಠಾಣಾ ಉಸ್ತುವಾರಿಯಲ್ಲಿ ಇದ್ದೆ. ಬಾತ್ಮಿದಾರರು ಆರೋಪಿ ಚಹರೆ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಪಂಚರಿಗೆ ಲಿಖಿತವಾಗಿ ನೋಟಿಸ್ ಕೊಟ್ಟಿರುವುದಿಲ್ಲ ಮೌಖಿಕವಾಗಿ ತಿಳಿಸಿರುತ್ತೇವೆ. ಪಂಚನಾಮೆ ಠಾಣೆಯಲ್ಲಿ ಕರೆಸಿಕೊಂಡಿರುವುದಿಲ್ಲ. ಠಾಣೆಯಿಂದ ನಾನು ಚಾಸಾ 4, 5 ಮತ್ತು ವಾಹನ ಚಾಲಕ ಹೋಗಿರುತ್ತೇವೆ. ಸಾಮಾನ್ಯವಾಗಿ ಬೇರೆ ಕಡೆಗೆ ಗಸ್ತಿಗೆ ಹೋದರೆ ದಿನಚರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಸದರಿ ದಿನಚರಿಯನ್ನು ಹಾಜರುಪಡಿಸಿರುವುದಿಲ್ಲ. ಠಾಣೆಯಿಂದ ಎನ್ ಬೇಗೂರಿಗೆ ಎಷ್ಟು ದೂರು ಆಗುತ್ತದೆ ಎಂದು ನೆನಪಿಲ್ಲ. ಯಾವ ಮಾರ್ಗವಾಗಿ ಹೋಗಿರುತ್ತೇವೆ ಎಂದು ನೆನಪಿಲ್ಲ. ಹೊನ್ನಮ್ಮನಕಟ್ಟೆ ಆದ ನಂತರ ಎನ್ ಬೇಗೂರು ಸಿಗುತ್ತದೆ ಎಂದರೆ ಸರಿ. ಹೊನ್ನಮ್ಮನಕಟ್ಟೆಯಿಂದ ಪಂಚರನ್ನು ಬರಮಾಡಿಕೊಂಡಿರುತ್ತೇನೆ. ಎನ್ ಬೇಗೂರಿನಲ್ಲಿ ಸುಮಾರು 300 ರಿಂದ 350 ಮನೆಗಳು ಇವೆ ಎಂದರೆ ಸರಿ. ಎನ್ ಬೇಗೂರಿಗೆ ಹೋದ ನಂತರ ಆರೋಪಿ ಮನೆ ಎಲ್ಲಿ ಬರುತ್ತದೆ ಎಂದು ವಿಚಾರಿಸಿರುವುದಿಲ್ಲ. ಘಟನೆಗೂ ಮುಂಚೆ ಆರೋಪಿ ಮನೆ ನೋಡಿರುವುದಿಲ್ಲ. ಆರೋಪಿ ಮನೆ ಮುಂದೆ 2-3 ಜನ ಕುಡಿಯುತ್ತಿದ್ದರು ಎಂದು ಹೇಳಿದ್ದು ಅವರನ್ನು ಹಿಡಿಯಲು

ಪ್ರಯತ್ನಪಟ್ಟಿರುವುದಿಲ್ಲ. ಮಧ್ಯ ಕುಡಿಯಲು ಬಳಸಿದ ಲೋಟ ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸದರಿ ಮನೆ ಯಾರಿಗೆ ಸೇರಿರುತ್ತದೆ ಎಂದು ವಿಚಾರಿಸಿರುವುದಿಲ್ಲ. ಸದರಿ ಮನೆ ಹಂಚಿನ ಮನೆ ಅಥವಾ ಶೀಟಿನ ಮನೆ ಎಂದು ಮಹಜರನಲ್ಲಿ ನಮೂದಿಸಿಲ್ಲ.

ಸಾಮಾನ್ಯವಾಗಿ ಮಧ್ಯದ ಪೌಚುಗಳ ಮೇಲೆ ಬ್ಯಾಚ್ ನಂ ನಮೂದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಆರೋಪಿ ಮನೆಯ ಅಕ್ಕ ಪಕ್ಕ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗೆ ಪೊಲೀಸರು ಹೋದರೆ ಜನ ಸೇರುತ್ತಾರೆ ಎಂದರೆ ಮಧ್ಯಾಹ್ನ ಆಗಿದ್ದರಿಂದ ಎಲ್ಲಾ ಕೆಲಸಕ್ಕೆ ಹೋಗಿದ್ದು, ಸ್ವಲ್ಪ ಜನರು ಸೇರಿರುತ್ತಾರೆ ಎಂದು ನುಡಿಯುತ್ತಾರೆ. ಅಲ್ಲಿಂದ ಸ್ಥಳೀಯರನ್ನು ಪಂಚನಾಮೆಗೆ ಸಹಕರಿಸಲು ಕೇಳಿರುವುದಿಲ್ಲ. ಆರೋಪಿ ಎಲ್ಲಿಂದ ತಂದಿರುತ್ತಾರೆ ಎಂದು ವಿಚಾರಿಸಿರುವುದಿಲ್ಲ. ಆರೋಪಿತನಿಗೂ ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಯಾರು ಮಹಜರ ಮಾಡಿಲ್ಲ ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ಮಾಲು ಸಮೇತ ಆರೋಪಿ ಪೋಟೋ ತೆಗೆದಿರುವುದಿಲ್ಲ. ಮುದ್ದೆ ಮಾಲುಗಳ ಮೇಲೆ ಪಂಚರ ಸಹಿ ಪಡೆದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**